ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೇ, 2007ರ ಕರ್ನಾಟಕ ಭೂ–ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ 2007 ರ ಕರ್ನಾಟಕ ಭೂ–ಕಂದಾಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಈಗ ಸದನವನ್ನು ಮಧ್ಯಾಹ್ನ 3 : 45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸಭೆಯು ಮಧ್ಯಾಹ್ನ 2 : 45 ನಿಮಿಷಕ್ಕೆ ಮುಂದೂಡಿ ಪುನಃ ಮಧ್ಯಾಹ್ನ 3 : 45 ಗಂಟೆಗೆ ಸೇರುವಂತೆ ನಿರ್ಣಯಿಸಿತು)

(ಸದನವು ಪುನಃ ಮಧ್ಯಾಹ್ನ 4 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ :– ಉಳ್ಳಾಗಡ್ಡಿ ಖರೀದಿ–ಹಣ ಬಿಡುಗಡೆ ಬಗ್ಗೆ.

ಶ್ರೀ ಡಿ.ಆರ್. ಪಾಟೀಲ್ (ಗದಗ) :– ಮಾನ್ಯ ಅಧ್ಯಕ್ಷರೆ, ಗದಗ ಜಿಲ್ಲೆಯಲ್ಲಿ ಉಳ್ಳಾಗಡ್ಡಿಯ ಬೆಲ್ಲು ಕೊಟ್ಟಿಲ್ಲ. ಇದರ ಬಗ್ಗೆ refer ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ನಿನ್ನೆಯೇ ಕೇಳಿದ್ದೆ. ಸದನದಲ್ಲಿ ಸಂಬಂಧಪಟ್ಟ Minister ಇದ್ದಾರೆ. ನಮ್ಮ ಜಿಲ್ಲೆಯಲ್ಲಿ ಸರ್ಕಾರ ಸುಮಾರು 16 ಕೋಟಿ ರೂಪಾಯಿಗಳಷ್ಟು ಉಳ್ಳಾಗಡ್ಡಿಯ ಬಿಲ್ ಕೊಡುವುದಿದೆ. ಅದರಲ್ಲಿ 11 ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದಾರೆ. ಇನ್ನು 5 ಕೋಟಿ 46 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ಬೇರೆ ಸಂಘಗಳ ಮುಖಾಂತರ ಸುಮಾರು ಏಳೂವರೆ ಸಾವಿರದಷ್ಟು

ರೈತರಿಗೆ ಕೊಡಬೇಕಾಗಿದೆ. ಅದನ್ನು ಪೆಂಡಿಂಗ್ ಇಟ್ಟು ನಾಲ್ಕು ತಿಂಗಳಾಯಿತು. ಈ ಬಗ್ಗೆ office ಗೆ ಹೋಗಿ ಕೇಳಿದರೆ, ಏನೋ audit ಮಾಡಿಸಬೇಕೆಂದು ಹೇಳಿದರು. ನೀವು ಆಡಿಟ್ ಮಾಡಿಸಿಕೊಳ್ಳಿ, ಏನಾದರೂ ಮಾಡಿಸಿಕೊಳ್ಳಿ, ರೈತರಿಗೆ ದುಡ್ಡು ಕೊಡುವುದನ್ನು ಏಕೆ ನಿಲ್ಲಿಸುತ್ತೀರಿ?

ತಪ್ಪು ಮಾಡಿದವರು ಯಾರೋ, ಖರೀದಿದಾರರಾದ ಅಧಿಕಾರಗಳು ತಪ್ಪು ಮಾಡುತ್ತಾರೆ, ಶಿಕ್ಷೆ ಆಗುವುದು ಮಾತ್ರ ರೈತರಿಗೆ! ತಪ್ಪು ಮಾಡಿರದ ಅವರನ್ನು ಶಿಕ್ಷಿಸುವುದೆಂದರೆ, ಬಹಳ ತಪ್ಪಾಗುತ್ತದೆ. ದಯವಿಟ್ಟು ನಾಳೆ ದುಡ್ಡನ್ನು immiediate ಆಗಿ release ಆಗುವಂತೆ ತಾವು ವ್ಯವಸ್ಥೆ ಮಾಡಬೇಕು. ತಮಗೆ ಗೊತ್ತಿದೆ. ನಮ್ಮ ಕಡೆ ಬರಗಾಲದಲ್ಲಿ ಉಳ್ಳಾಗಡ್ಡಿಯೊಳಗೆ ಏನೋ ಸ್ವಲ್ಪ ದುಡ್ಡು ಬಂದಿತ್ತು. ಅದು ನಿಮ್ಮ ಕಡೆ ಉಳಿದುಕೊಂಡಿತು. ನೀವು ಖರೀದಿ ಬಂದ್ ಮಾಡಿದ ನಂತರ ಮಾರುಕಟ್ಟೆಯಲ್ಲಿ ಉಳ್ಳಾಗಡ್ಡಿ ರೇಟ್ ಏರಿಕೆಯಾಗುತ್ತಾ ಹೋಯಿತು. ನೀವು ಖರೀದಿಸಲಿಲ್ಲವೆಂದರೆ, ಅದು ನಮ್ಮ ಹೊಲದೊಳಗೇ ಉಳಿಯುತ್ತಿತ್ತು ಮತ್ತು ಛಲೋ ರೇಟ್ ರೈತರಿಗೆ ಸಿಗುತ್ತಿತ್ತು. ಆದರೆ, ಖರೀದಿಯೂ ಮಾಡಲಿಲ್ಲ, ದುಡ್ಡೂ ಸಿಗಲಿಲ್ಲ. ಅದಕ್ಕೋಸ್ಕರ, ಯಾರೋ ಮಾಡಿದ ತಪ್ಪಿಗೆ ರೈತರನ್ನು ಶಿಕ್ಷಿಸುವುದಕ್ಕೆ ಹೋಗಬೇಡಿ. ನಾಳೆ ದುಡ್ಡು release ಆಗುವಂತೆ ಮಾಡಬೇಕು. ಮತ್ತು ನಾಲ್ಕು ತಿಂಗಳು ಏನು delay ಮಾಡಿದ್ದೀರಿ. ಅದಕ್ಕೆ ಬಡ್ಡಿ ಹಾಕಿ, ಆ ರೈತರಿಗೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಮಾಮನಿ ವಿಶ್ವನಾಥ್ ಕರಬಸಪ್ಪ :– ಖರೀದಿಯಾಗಿರುವುದು 3 ಕೋಟಿ 71 ಲಕ್ಷ ಮಾತ್ರ. ಇನ್ನೂ 41 ಲಕ್ಷ ಉಳಿದಿದೆ. ನಾವು ಎಲ್ಲವನ್ನೂ audit ಮಾಡಿ ಕಳುಹಿಸಿದ್ದರೂ, ನಮ್ಮ ಹಣ ಬಂದಿಲ್ಲ. 5 ತಿಂಗಳುಗಳಿಂದಲೂ 41 ಲಕ್ಷ ರೂಪಾಯಿಗಳು ಬಂದಿಲ್ಲ. ರೈತರೆಲ್ಲರೂ ಅಲ್ಲಿನ ಸೊಸೈಟಿ ಮುಂದೆ ಕುಳಿತಿದ್ದಾರೆ. ಅವರಿಗೆ ಹಣ ಕೊಡುವವರು ದಿಕ್ಕಿಲ್ಲ ಆಡಿಟ್ ಮಾಡಿ ಕಳುಹಿಸಿದ್ದೇವೆ. 41 ಲಕ್ಷ ಬಾಕಿ ಇದೆ. ಅದನ್ನು ಆದಷ್ಟು ತೀವ್ರವಾಗಿ ಕಳುಹಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪಗೌಡ ದರ್ಶನಾಪುರ (ಕೃಷಿ ಮಾರುಕಟ್ಟೆ ಸಚಿವರು) :– ಬೆಳಗಾವಿ, ಗದಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಉಳ್ಳಾಗಡ್ಡಿಯನ್ನು ಹೆಚ್ಚಾಗಿ ಖರೀದಿಸಿರತಕ್ಕಂಥಾದ್ದು. ಈಗಾಗಲೇ ಸುಮಾರು ಬಹುತೇಕ ಹಣವನ್ನು ಬಿಡುಗಡೆ

ಮಾಡಲಾಗಿದೆ. ಉಳಿದಿರುವ ಹಣವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ, ಈಗ ಏನು ಆಡಿಟ್ ರಿಪೋರ್ಟ್ ಬಗ್ಗೆ ಮಾನ್ಯ ಸದಸ್ಯರಾದ ಡಿ.ಆರ್. ಪಾಟೀಲ್‌ರು ಮಾತನಾಡುತ್ತಾ ಆಡಿಟ್ ರಿಪೋರ್ಟ್ ಬಂದಿಲ್ಲ, ಅದಕ್ಕೋಸ್ಕರ ಹಣ ಬಿಡುಗಡೆ ಮಾಡಿಲ್ಲವೆಂದು ಏನು ಹೇಳಿದ್ದಾರೆ, ನಾವು ಇಲಾಖಾಧಿಕಾರಿಗಳಿಗೆ ಹೇಳಿದ್ದೇವೆ ಆಡಿಟ್ ರಿಪೋರ್ಟ್ ಬರುತ್ತದೋ, ಬಿಡುತ್ತದೋ, ಅದರ ಬಗ್ಗೆ ಅನಂತರ ಕ್ರಮ ಕೈಗೊಳ್ಳಿ. ಆದರೆ Director ಊರಿನಲ್ಲಿರುವುದರಿಂದ 19 ನೇ ತಾರೀಖಿನೊಳಗೆ ಬಿಡುಗಡೆ ಮಾಡಬೇಕು. ಬೆಳಗಾವಿ ಇರಬಹುದು, ಧಾರವಾಡ ಇರಬಹುದು, ಸುಮಾರು 10–11 ಕೋಟಿ ರೂಪಾಯಿಗಳಷ್ಟು ಹಣ ಇದೆ.

ಗದಗಕ್ಕೆ 11 ಕೋಟಿ ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದೇವೆ. ಇನ್ನೂ 4 ಕೋಟಿಯಷ್ಟು ಬಾಕಿ ಇದೆ. 19 ನೇ ತಾರೀಖಿನೊಳಗೆ ಸಂಪೂರ್ಣವಾಗಿ ಹಣ ಬಿಡುಗಡೆ ಮಾಡುತ್ತೇವೆ. ಆಡಿಟ್ ರಿಪೋರ್ಟ್ ಬರಲಿ, ಬಿಡಲಿ, ಮಾನ್ಯ ಸದಸ್ಯರು ಮಾತನಾಡುತ್ತಾ fax ಬಂದಿದೆ, audit report ಕಳುಹಿಸಿದ್ದೇವೆಂದು ಏನು ಹೇಳಿದ್ದೀರಿ, ಅದು ಇನ್ನೂ ಬಂದಿಲ್ಲ. ಆದರೂ ಕೂಡ ಬೆಳಗಾವಿ ಮತ್ತು ಗದಗ ಜಿಲ್ಲೆಗಳ D.C ಗಳೊಂದಿಗೆ ಮಾತನಾಡಿದ್ದೇನೆ. ಆದಷ್ಟು ಬೇಗ ಕಳುಹಿಸಿರಿ. ಅದು ಬರಲಿ, ಬಿಡಲಿ. 19 ನೇ ತಾರೀಖಿನೊಳಗೆ ಇನ್ನು 15 ಕೋಟಿ ರೂಪಾಯಿಗಳು ಏನು ಉಳಿದಿದೆ, ಅದನ್ನು ಸಂಪೂರ್ಣವಾಗಿ ಕೊಡುವ ಕೆಲಸ ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ :– ಬಡ್ಡಿಯನ್ನೂ ಕೊಡುವಂತೆ ನಾವು ಹೇಳಿದ್ದೇವೆ. ಬಡ್ಡಿಯನ್ನೂ ಕೊಡುವಂತೆ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು :– ಪಾಟೀಲರೆ, ಅದು ಕೊಡಿ, ಇದು ಕೊಡಿ ಎಂದು ಶೂನ್ಯ ವೇಳೆಯಲ್ಲೇ ಎಲ್ಲಾ ಪ್ರಸ್ತಾಪಿಸಿದರೆ ಹೇಗಾಗುತ್ತದೆ?

ಶ್ರೀ ಡಿ.ಆರ್. ಪಾಟೀಲ್ :– ಇವತ್ತು A.P.M.C Bill ಅನ್ನು introduce ಮಾಡುತ್ತಿದ್ದಾರೆ. ಅದರಲ್ಲಿ delayed payment ಗೆ ಬಡ್ಡಿ ಕೊಡಬೇಕೆಂದಿದೆ. ಆದುದರಿಂದ, ಅದನ್ನು consider ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ :– ಏನು ಕೊಡಬಹುದೋ, ಅದನ್ನು ಕೊಡುವುದಕ್ಕೆ ಬರುತ್ತದೆ. ಅದನ್ನು ತಪ್ಪಿಸುವುದಕ್ಕಾಗುತ್ತದೆಯೇ?